ಕರ್ನಾಟಕ ವಿಧಾನಪರಿಷತ್ತು

ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

ಚುಕ್ಕೆ ರಹಿತ ಪ್ರಶ್ನೆ

ದಿನಾಂಕ : 09-03-2021 ಪ್ರಶ್ನೆ ಸಂಖ್ಯೆ : 666(879)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಅರವಿಂದ ಕುಮಾರ ಅರಳಿ(ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರ ನೀಡಬೇಕಾದ ದಿನಾಂಕ : 09-03-2021

ಉತ್ತರಿಸುವ ಸಚಿವರು: ಮಾನ್ಯ ಸಹಕಾರ ಸಚಿವರು

ವಿಷಯ : 2018-19 ರಿಂದ 2020-21ನೇ ಸಾಲಿನ ಬೀದರ್ ಜಿಲ್ಲೆಗೆ ಬಂದಿರುವ ಅನುದಾನದ ಬಗ್ಗೆ

(ಅ) 2018-19 ರಿಂದ 2020-21ನೇ ಸಾಲಿನಲ್ಲಿ ಬೀದರ್ ಜಿಲ್ಲೆಗೆ ಬಂದಿರುವ ಅನುದಾನವು ಯಾವ ಯಾವ ಕಾರ್ಯಕ್ರಮಗಳಿಗೆ ಖರ್ಚಾಗಿರುತ್ತದೆ ಹಾಗೂ ಉಳಿದ ಅನುದಾನ ಎಷ್ಟು; (ವಿವರವಾದ ಮಾಹಿತಿ ಒದಗಿಸುವುದು)

(ಆ) ಜಿಲ್ಲೆಯಲ್ಲಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಕೋ-ಆಪರೇಟಿವ್ ಸೊಸೈಟಿಗಳೆಷ್ಟು; ಕಳೆದ ವರ್ಷಗಳಿಂದ ಅನುದಾನ ನೀಡಿರುವ ಬಗ್ಗೆ ಹಾಗೂ ಅನುದಾನ ಪಡೆಯಲು ಸರ್ಕಾರದ ಮಾನದಂಡಗಳೇನು; (ವಿವರವಾದ ಮಾಹಿತಿ ನೀಡುವುದು)

(ಇ) ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳಲ್ಲಿ ನಿರ್ದೇಶಕರಾಗಲು ರೋಸ್ಟರ್ ಪದ್ಧತಿ ಇಲ್ಲವೇ; ಇಲ್ಲದಿದ್ದರೆ, ಮಾಡುವ ಯೋಚನೆ ಸರ್ಕಾರದ ಮುಂದಿದೆಯೇ;

(ಈ) ರೋಸ್ಟರ್ ಇಲ್ಲದಿದ್ದಕ್ಕೆ ಎಸ್.ಸಿ/ಎಸ್.ಟಿ. ಮೈನಾರಿಟಿ ಮತ್ತು ಮಹಿಳೆಯರಿಗೆ ಸಾಲ ಸೌಲಭ್ಯ ದೊರೆಯುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಉ) ಸಹಕಾರ ಸಂಘಗಳ ರಾಜ್ಯ ವಲಯ ಯೋಜನೆಗಳಲ್ಲಿ ವಿವಿಧ ಸಹಕಾರಿ ಸಂಘಗಳಲ್ಲಿ ಎಷ್ಟು ಬಿ.ಪಿ.ಎಲ್., ಎಸ್.ಸಿ./ಎಸ್.ಟಿ./ಒ.ಬಿ.ಸಿ., ಮೈನಾರಿಟಿ ಮಹಿಳೆ ಮತ್ತು ಅಂಗವಿಕಲ ವರ್ಗಗಳಿವೆ; ಎಷ್ಟು ಜನರನ್ನು ಸದಸ್ಯತ್ವ ಮಾಡಿ ಸಾಲ ನೀಡಲಾಗಿದೆ; (ವಿವರವಾದ ತಾಲ್ಲೂಕು ಮತ್ತು ಸೊಸೈಟಿವಾರು ಮಾಹಿತಿ ನೀಡುವುದು)

(ಊ) ಸಹಕಾರ ಸಂಘಗಳಲ್ಲಿ (ಸೊಸೈಟಿ) ಎಷ್ಟು ಪ್ರತಿಶತ ಸದಸ್ಯತ್ವ ಈ ವರ್ಗದ ಜನರಿಗೆ ನೀಡಬೇಕೆನ್ನುವ ನಿಯಮವಿದೆ?